# NISARGA VIDYANIKETHANA

# ಪ್ರಕೃತಿ ಸಂಪದ

ವಿದ್ಯಾರ್ಥಿ ಮಂಥನ



## ವಾರ್ಷಿಕ ವಿಶೇಷ ಸಂಚಿಕೆ

## ಸಮಸ್ತ ಜನತೆಗೆ ಶೋಭಕೃತ್ ಸಂವತ್ಸರ ಯುಗಾದಿ ಹಬ್ಬದ ಶುಭಾಶಯಗಳು

## MOVING TOWARDS PERFECTNESS

ಭವಿಷ್ಯದ ಸಮಾಜ ನಿರ್ಮಾತೃಗಳಾದ ಇಂದಿನ ಮಕ್ಕಳನ್ನು ಸೂಕ್ತ ರೀತಿಯಲ್ಲಿ ಸಿದ್ಧತೆ ಮಾಡುವುದರಲ್ಲಿ ಕುಟುಂಬ, ಶಿಕ್ಷಣ ಸಂಸ್ಥೆಗಳು, ಮತ್ತು ಸಾಮಾಜಿಕ ಪರಿಸರ ತುಂಬಾ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಶಿಕ್ಷಣದ ಗುರಿಯು ಕೇವಲ ಉದ್ಯೋಗ ಗಳಿಕೆಯ ಕೇಂದ್ರೀಕೃತವಾಗದೆ, ವ್ಯಕ್ತಿತ್ವ ವಿಕಸನದೊಂದಿಗೆ ಜೀವನವನ್ನು ರೂಪಿಸಿಕೊಳ್ಳುತ್ತಾ ಸುಭದ್ರವಾದ ಸಮಾಜಕ್ಕೆ ಅಡಿಪಾಯವಾಗುವುದೇ ಆಗಿರುತ್ತದೆ. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ಶಿಕ್ಷಣದ ಮಹತ್ವವನ್ನರಿಯದೆ ಕೇವಲ ಅಂಕ ಗಳಿಕೆಗಳಿಗೆ ಸೀಮಿತಗೊಳಿಸಿ ಪಡೆದ ಜ್ಞಾನವನ್ನು ಬಹುಮುಖ ಪ್ರತಿಭೆಗಳಲ್ಲಿ ವ್ಯಕ್ತಪಡಿಸುತ್ತಾ ಮಕ್ಕಳು ಸ್ವಯಂ ಪ್ರಕಾಶಿಸಲು ಭವಿಷ್ಯಃ ಸಾಧ್ಯವಾಗುತ್ತಿಲ್ಲವೆನಿಸುತ್ತದೆ. ಇದಕ್ಕೆ ಬೇರೆಯವರನ್ನು ಹೊಣೆ ಮಾಡಿ ತೋರಿಸದೆ ನಮ್ಮ ಕರ್ತವ್ಯ ಪಾಲನೆಯನ್ನು ಸರಿಯಾಗಿ ನಿರ್ವಹಿಸುತ್ತಿದ್ದೇವೆಯೇ ಎಂದು ಮತ್ತೊಮ್ಮೆ ವಿಶ್ಲೇಷಿಸಿಕೊಳ್ಳಬೇಕಾಗಿದೆ. ಇಂದಿನ ಮಕ್ಕಳಲ್ಲಿ ತಾನು ಯಾವ ಉನ್ನತ ವ್ಯಾಸಂಗದಲ್ಲಿ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು. ನನಗೆ ಅದರಲ್ಲಿ ದೊರೆಯುವ ದೀರ್ಘಕಾಲಿನ ಫಲಿತಾಂಶಗಳು ಸಮಾಜಕ್ಕೆ ಹೇಗೆ ಸುಭದ್ರತೆಯನ್ನು ಒದಗಿಸುತ್ತವೆ, "ಸರ್ವೇ ಜನೋ ಸುಖಿನೋ ಭವಂತು" ಎಂಬ ನುಡಿಯಂತೆ ಸಮಾಜದ ಎಲ್ಲಾ ಸ್ತರದ ಜನರು ಸಂತೋಷದಿಂದ ಇರಬೇಕು. ಈ ದೆಸೆಯಲ್ಲಿ ನಿಸರ್ಗ ವಿದ್ಯಾನಿಕೇತನವು ಕಳೆದ 22 ವರ್ಷಗಳಿಂದಲೂ ಸತತವಾಗಿ ತನ್ನನ್ನು ತಾನೇ ಒರೆಗಚ್ಚಿಕೊಳ್ಳುತ್ತಾ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಕೇವಲ ನಾಲ್ಕು ಗೋಡೆಗಳ ಮಧ್ಯದಲ್ಲಿ ಕಲಿಕೆಯನ್ನು ಸೀಮಿತಗೊಳಿಸದೆ ಎಲ್ಲೆಲ್ಲಿ ಅವಕಾಶ ದೊರೆಯುತ್ತದೆಯೋ , ಅಲ್ಲೆಲ್ಲಾ ಮಕ್ಕಳಿಗೆ ತಮ್ಮ ಗುರಿ ಮತ್ತು ಗುರಿ ತಲುಪಿಸುವ ಸಾಧನಗಳ ಬಗ್ಗೆ ಅರಿವು ಮೂಡಿಸುತ್ತಿದೆ. ಇದರ ವಿವರಣೆಗಳು ಇದೇ ಪತ್ರಿಕೆಯ ಒಳಹೂರಣವಾಗಿರುತ್ತವೆ.

ಮುಖ್ಯವಾಗಿ ಪ್ರಕೃತಿಯಲ್ಲಿ ಯಾವುದೇ ವಸ್ತುವು ಅನುಪಯುಕ್ತವಲ್ಲ. ಒಂದಲ್ಲ ಒಂದು ಸಮಯದಲ್ಲಿ ಉಪಯೋಗಕ್ಕೆ ಬಂದೇ ಬರುತ್ತವೆ. ಅದೇ ರೀತಿ ಎಲ್ಲಾ ಮಕ್ಕಳಲ್ಲೂ ಒಂದೇ ರೀತಿಯ ಕಲಿಕೆಯನ್ನು ಕಾಣಲು ಸಾಧ್ಯವಿಲ್ಲ. ಅವರವರ ಕಲಿಕಾ ಸಾಮರ್ಥ್ಯವನ್ನು ಗುರುತಿಸಿ ಸೂಕ್ತ ಮಾರ್ಗದರ್ಶನದೊಂದಿಗೆ ಪೋಷಿಸುತ್ತಾ ಬಂದಲ್ಲಿ ಎಲ್ಲಾ ಮಕ್ಕಳು ಸಮಾಜದ ಆಸ್ತಿಯಾಗುತ್ತಾರೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತರಲು ಉದ್ದೇಶಿಸಿರುವ ಹೊಸ ಶಿಕ್ಷಣ ನೀತಿ (N E P) ಸೂಕ್ತ ಸೇತುವೆಯಾಗಬಹುದೆಂದು ಭಾವಿಸುತ್ತಾ, ನಾವು-ನೀವೆಲ್ಲ ಕೈಜೋಡಿಸಿ ಸುಸಂಸ್ಕೃತ ಸಮಾಜವನ್ನು ನಿರ್ಮಾಣ ಮಾಡೋಣ ಬನ್ನಿ. ಮತ್ತೊಮ್ಮೆ ಎಲ್ಲರಿಗೂ ಶೋಭಕೃತ್ ಸಂವತ್ಸರ ಯುಗಾದಿ ಹಬ್ಬದ ಶುಭಾಶಯಗಳು.

## ನಿಸರ್ಗ ವಿದ್ಯಾನಿಕೇತನ ಶಾಲೆಯ ಕಿರುಪರಿಚಯ....



ಪ್ರಸ್ತುತ ಹಾಗೂ ಭವಿಷ್ಯತ್ತಿನ ಸವಾಲುಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಶಿಸ್ತು, ಸಂಯಮ, ಸಂಸ್ಕಾರಯುತ ಶಿಕ್ಷಣ ನೀಡುವಂತಹ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ನಿಸರ್ಗ ವಿದ್ಯಾನಿಕೇತನ ಶಾಲೆಯೂ ಒಂದು. ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ನಿಸರ್ಗ ಎಜುಕೇಶನ್ ಸೊಸೈಟಿಯು **1999- 2000** ನೇ ಸಾಲಿನಲ್ಲಿ ಶಾಲೆಯನ್ನು ಆರಂಭಿಸಿತು. ಸ್ವಾಮೀಜಿಯವರ ಆಶಯದಂತೆ ಸಂಸ್ಥಾಪಕರಾದ ಕೆ. ಉದಯ ರತ್ನ ಕುಮಾರ್ ರವರ ಮಾರ್ಗದರ್ಶನದಲ್ಲಿ ಶಾಲೆಯು ಸಂಸ್ಕಾರಯುತ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ, ಭವಿಷ್ಯತ್ತಿನ ಜವಾಬ್ದಾರಿಯುತ ಪ್ರಜೆಗಳನ್ನು ರೂಪಿಸುತ್ತಾ ಮುಂದೆ ಸಾಗುತ್ತಿದೆ.
ಡಿ.ವಿ. ಜಿ ಯವರ "ಹಳೆ ಬೇರು,ಹೊಸ ಚಿಗುರು" ಎಂಬ ಉಕ್ತಿಯಂತೆ ಆಧುನಿಕ ತಂತ್ರಾಂಶಗಳ ವ್ಯವಸ್ಥೆಯನ್ನು ಉಪಯೋಗಿಸಿಕೊಂಡು ಭಾರತೀಯ ಪರಂಪರೆಯ ಗುರುಕುಲ ಮಾದರಿಯ ಶೈಕ್ಷಣಿಕ ಸೇವೆಯನ್ನು ಸಮಾಜಕ್ಕೆ ಕೊಡಲು ಸದಾಕಾಲ ಬದ್ಧರಾಗಿರುತ್ತೇವೆ.





Well Stocked Library



Well Equipped Science Lab



Internet Enabled Computer Lab



Vast Audio-Visual Room



Scouts & Guides, Rajya Puraskar



Pre-Primary Activity Room

# RANKED 1 FOR "VALUE FOR MONEY"




ಪ್ರತಿ ವರ್ಷ ದೇಶದ ಪ್ರತಿಷ್ಠಿತ ಎಜುಕೇಶನ್ ಟುಡೆ ಸಂಸ್ಥೆಯವರು ದೇಶಾದ್ಯಂತ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ **60** ಕ್ಕಿಂತಲೂ ಹೆಚ್ಚು ಆಯಾಮಗಳಲ್ಲಿ ಸಮೀಕ್ಷೆಯನ್ನು ಮಾಡಿಕೊಂಡು ಬರುತ್ತಿದೆ. ಅದರಂತೆ **2022 -23** ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಬೋಧಿಸುವ ಶಾಲೆಗಳಲ್ಲಿ ಮೌಲ್ಯಯುತ ಹಣಕಾಸು ನಿರ್ವಹಣೆಗೆ ಸಂಬಂಧಿಸಿದಂತೆ ಎಜುಕೇಶನ್ ಟುಡೆ ಸಂಸ್ಥೆಯು ದೇಶದಾದ್ಯಂತ ವಿವಿಧ ಆಯಾಮಗಳಲ್ಲಿ ಸಮೀಕ್ಷೆಯನ್ನು ನಡೆಸಿ ರಾಜ್ಯ ಪಠ್ಯಕ್ರಮದ ಶಾಲೆಗಳಿಗೆ ಕೊಡಮಾಡುವ **Ranked No. 1 in Value for money** ಎಂಬ ರಾಷ್ಟ್ರೀಯ ಅಗ್ರಮಾನ್ಯ ಪ್ರಶಸ್ತಿಯನ್ನು ನಮ್ಮ ಶಾಲೆಗೆ ನೀಡಿ ಗೌರವಿಸಿದೆ. ಕಳೆದ **2021 - 22** ನೇ ಸಾಲಿನಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಜ್ಯ ಪಠ್ಯಕ್ರಮದ ಶಾಲೆಗಳಿಗೆ ಕೊಡ ಮಾಡುವ ಪ್ರಸಿದ್ಧ **Ranked No. 1 in Co-curricular Education** ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನೂ ಪ್ರಶಸ್ತಿಯನ್ನು ಸಹ ಪಡೆದಿದೆ. ಸತತವಾಗಿ ಎರಡನೇ ಬಾರಿ ದೇಶದಲ್ಲೇ ಮೊದಲ ಸ್ಥಾನ ಗಳಿಸಿರುವ ಹೆಗ್ಗಳಿಕೆಗೆ ನಮ್ಮ ಶಾಲೆ ಪಾತ್ರವಾಗಿದೆ. ಇಷ್ಟೇ ಅಲ್ಲದೆ ಕಳೆದ 2 ದಶಕಗಳಿಂದ ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಪ್ರಶಸ್ತಿ-ಪುರಸ್ಕಾರಗಳಿಗೂ ಸಹ ಶಾಲೆ ಭಾಜನವಾಗಿದೆ. ಬೆಂಗಳೂರಿನ ಸ್ವಾಮಿ ವಿವೇಕಾನಂದ ಯೋಗ ಸಂಶೋಧನಾ ಸಂಸ್ಥೆ ಹಾಗೂ ಅಮೆರಿಕ ಯೋಗ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಡೆದ ವೀರಭದ್ರಾಸನದಲ್ಲಿ ನೀಡಿದ ಅತ್ಯುತ್ತಮ ಪ್ರದರ್ಶನಕ್ಕಾಗಿ ನಮ್ಮ ಶಾಲೆಯು ಗಿನ್ನಿಸ್ ದಾಖಲೆಗೆ ಸೇರ್ಪಡೆಗೊಂಡಿರುವುದು ಹೆಮ್ಮೆಯ ಸಂಗತಿ.

For More Info

## GIVE YOUR CHILD AN OPPORTUNITY TO SUCCEED

Follows Us Here

## ADMISSIONS ARE OPEN NOW



# ಪ್ರಕೃತಿ ಸಂಪದ

## ವಿದ್ಯಾರ್ಥಿ ಮಂಥನ





# ನಿಸರ್ಗೋತ್ಸವ ಶಿಶಿರ



ಪ್ರತಿ ವರ್ಷವೂ ಜನವರಿ 12ರಂದು ಸ್ವಾಮಿ ವಿವೇಕಾನಂದರ ಜನ್ಮ ಜಯಂತಿಯ ಪ್ರಯುಕ್ತ ನಿಸರ್ಗೋತ್ಸವ ಶಿಶಿರವನ್ನು ಭಾರತದ ಸಂಸ್ಕೃತಿ, ಸಂವೃದ್ಧಿ ಮತ್ತು ಸಂಪತ್ತನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಸಲುವಾಗಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

ಪ್ರಸ್ತುತ **2022- 23**ನೇ ಶೈಕ್ಷಣಿಕ ವರ್ಷದಲ್ಲಿ ಜನನೀ ಜನ್ಮಭೂಮಿ ಎಂಬ ಶೀರ್ಷಿಕೆಯೊಂದಿಗೆ ವಿದ್ಯಾರ್ಥಿಗಳಿಗೆ ಮಾತೃಭೂಮಿ ಮತ್ತು ಮಾತೃವಿನ ಪ್ರಾಮುಖ್ಯತೆಯನ್ನು ನೀಡುವ ನಿಟ್ಟಿನಲ್ಲಿ ಸುಪ್ರಸಿದ್ಧ ಗೀತೆಗಳಾದ ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು, ಉಜ್ವಲ ಇತಿಹಾಸ ಎಮ್ಮದು ಭಾರತ ನಾಡಿನ ಸ್ಫೂರ್ತಿಯದು, ಅಮ್ಮ ನಿನ್ನ ತೋಳಿನಲ್ಲಿ ಕಂದ ನಾನು, ನನ್ನ ದೇಶ ಭಾರತ ಭಾರತೀಯರು ನಾವೆಲ್ಲ.... , ಸಾವಿರದಳ ಕಮಲಿ ನೀ ಓ ಭಾರತೀ...., ನಮ್ಮ ತಾಯಿ ಭಾರತಿ ನಮ್ಮ ದೇಶ ಭಾರತ, ಈ ನಾಡು ಚೆನ್ನ ಈ ಮಣ್ಣು ಚೆನ್ನಾ..., ತಾಯಿ - ತಂದೆ ಇಬ್ಬರು ಕಣ್ಣಿಗೆ ಕಾಣುವ ದೇವರು, ತಾಯಿ ಭಾರತೀಯ ಪಾದ ಪದ್ಮಗಳ ಪೂಜಿಸೋಣ ಬನ್ನಿ..., ದೇಶ ದೇಶ ದೇಶ ದೇಶ ದೇಶ ನನ್ನದು , ಇತ್ಯಾದಿ ಗೀತೆಗಳಿಗೆ ನೃತ್ಯ ಮತ್ತು ಕಿರು ನಾಟಕಗಳನ್ನು ಮಾಡಿಸುವುದರ ಮೂಲಕ ಮಕ್ಕಳಿಗೆ ಭೂಮಿತಾಯಿಯೇ ಭದ್ರವಾದ ನೆಲೆಗಟ್ಟು ಹಾಗೂ ತಾಯಿಯ ಪ್ರೀತಿ, ವಾತ್ಸಲ್ಯ ಆಶೀರ್ವಾದಗಳೇ ಶಾಶ್ವತವೆಂಬ ಸಂದೇಶವನ್ನು ನೀಡುವ ನಿಟ್ಟಿನಲ್ಲಿ ಹಾಗೂ ಮುಖ್ಯವಾಗಿ ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸುವ ಸೂಕ್ತ ವೇದಿಕೆಯೊಂದಿಗೆ ನಿಸರ್ಗೋತ್ಸವ ಶಿಶಿರವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪ್ರಸ್ತುತ ಹೊರದೇಶಗಳಿಗೆ ಉದ್ಯೋಗ ಹರಸಿ ಹೋಗಿದ್ದವರು ಅಲ್ಲಿನ ರಾಜಕೀಯ ಮತ್ತು ಆರ್ಥಿಕ ಬದಲಾಗುತ್ತಿರುವ ವ್ಯವಸ್ಥೆಯಿಂದ ಲಕ್ಷಾಂತರ ಜನ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಹೋಗದಿರೀ ಸೋದರರೇ, ಹೋಗದಿರೀ ಬಂಧುಗಳೇ, ಮನೆಯನು ತೊರೆದು ಹೋಗುವಿರಾ? ಮನಗಳ ಮರೆತು ಅಗಲುವಿರಾ ... ಎಂಬ ಹಾಡಿನ ರಚನೆಯ ಹಿಂದಿರುವ ಅರ್ಥವನ್ನು ತಿಳಿದು, ಜನನಿ ಮತ್ತು ಜನ್ಮ ಭೂಮಿಯ ಮಹತ್ವದ ಅರಿವನ್ನು ಮೂಡಿಸುವ ಕಾರ್ಯಕ್ರಮ ಇದಾಗಿತ್ತು.



ಪ್ರತಿಯೊಂದು ಮಗುವಿನ ವಿದ್ಯಾಭ್ಯಾಸವನ್ನು ಪ್ರಾರಂಭಿಸುವ ಮೊದಲು,ವಿದ್ಯೆಯ ಅಧಿದೇವತೆಯಾದ ತಾಯಿ ಶಾರದೆ ಆಶೀರ್ವಾದವು ಬಹಳ ಮುಖ್ಯ .ನಮ್ಮ ಶಾಲೆಯಲ್ಲಿ ಪೂರ್ವ- ಪ್ರಾಥಮಿಕ ವಿಭಾಗಕ್ಕೆ ದಾಖಲಾದಂತಹ ಪುಟ್ಟ-ಪುಟ್ಟ ಮಕ್ಕಳು ತಮ್ಮ ತಂದೆ-ತಾಯಿಗಳೊಂದಿಗೆ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಕ್ಷರಾಭ್ಯಾಸವನ್ನು ಮಾಡಿರುತ್ತಾರೆ.

ಪಠ್ಯದ ಜೊತೆ - ಜೊತೆಗೆ ದೇಹದ ಹಾಗೂ ಮನಸ್ಸಿನ ಆಯಾಸವನ್ನು ನೀಗಿಸುವ ಚಟುವಟಿಕೆಗಳು ಮಕ್ಕಳಿಗೆ ಅನಿವಾರ್ಯ. ಯೋಗಾಭ್ಯಾಸವು ದೇಹ ಮತ್ತು ಮನಸ್ಸನ್ನು ಕೇಂದ್ರೀಕರಿಸಲು ಬಹಳ ಅವಶ್ಯಕವಾಗಿದ್ದು, ಅಂತಹ ಒಂದು ಕಾರ್ಯಕ್ರಮವಾದ "ಫಿಟ್ ಇಂಡಿಯಾ " ಎಂಬ ಅಭಿಯಾನದಲ್ಲಿ ನಮ್ಮ ಶಾಲೆಯ ಮಕ್ಕಳು ಪಾಲ್ಗೊಂಡು ಪ್ರಶಂಸಾ ಪತ್ರವನ್ನು ಪಡೆದಿರುತ್ತಾರೆ.






**75** ನೇ ಸ್ವಾತಂತ್ರ್ಯ ದಿನಾಚರಣೆಯನ್ನು "ಆಜ಼ಾದಿ ಕಾ ಅಮೃತ್ ಮಹೋತ್ಸವ್ " ಎಂದು ಅದ್ದೂರಿಯಾಗಿ ಶಾಲೆಯ ಆವರಣದಲ್ಲಿ ಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು ಈ ಕಾರ್ಯಕ್ರಮಕ್ಕೆ ವಿಜಯವಾಣಿ ದಿನ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀಯುತ ರವೀಂದ್ರ ಸುರೇಶ್ ದೇಶ್ ಮುಖ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ದೇಶದ ಬಗ್ಗೆ ಮಕ್ಕಳಿಗೆ ಹಿತವಚನವನ್ನು ನೀಡಿದರು.

ಪರಿಸರ ಹಾಕಿಕೊಡುವ ದಾರಿಯಲ್ಲಿ ನಡೆಯಬೇಕೆಂಬ ನಾಣ್ನುಡಿ ಯಂತೆ ನಮ್ಮ ಶಾಲೆಯು ಅದನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ನಮ್ಮ ಶಾಲೆಯಲ್ಲಿ "ತಾರಸಿ ತೋಟವನ್ನು ನಿರ್ಮಿಸಿ" ಹಿರಿಯ ಪ್ರಾಥಮಿಕ ಮಕ್ಕಳಿಗೆ ಮಾರ್ಗದರ್ಶನ ನೀಡಲಾಗಿದ್ದು , ಮಕ್ಕಳೂ ಸಹ ಹುಮ್ಮಸ್ಸಿನಿಂದ ಅಚ್ಚುಕಟ್ಟಾಗಿ ಎಲ್ಲಾ ಗಿಡಗಳನ್ನು ಪಾಲಿಸಿ ಪೋಷಿಸುತ್ತಿರುವುದು ಗಮನಾರ್ಹವಾಗಿದೆ.





ನಿಸರ್ಗ ಕ್ರೀಡಾಕೂಟ **2022-23** ನ್ನು ನವೆಂಬರ್ ತಿಂಗಳಿನಲ್ಲಿ ಆಯೋಜಿಸಲಾಗಿತ್ತು. ಎಲ್ಲಾ ಮಕ್ಕಳು ಉತ್ಸಾಹದಿಂದ ಕ್ರೀಡೆಯಲ್ಲಿ ಪಾಲ್ಗೊಂಡು, ಜಯಶೀಲರಾದಂತಹ ಮಕ್ಕಳಿಗೆ ಹಾಗು ಹೆಚ್ಚು ಅಂಕಗಳಿಂದ ಮುನ್ನಡೆ ಸಾಧಿಸಿದ ಪೃಥ್ವಿ ತಂಡಕ್ಕೆ ಈ ಸಮಾರಂಭಕ್ಕೆ ಆಗಮಿಸಿದ ಮುಖ್ಯ ಅತಿಥಿಗಳಾದ ಶ್ರೀಯುತ ಪ್ರಕಾಶ್ ಮತ್ತು ಸರಳ ಎನ್ ಸ್ವಾಮಿ ರವರು ಬಹುಮಾನ ನೀಡುವುದರ ಮೂಲಕ ಹಾರೈಸಿದರು.

ಬಣ್ಣ-ಬಣ್ಣದ ದೀಪಗಳನ್ನು ಹಚ್ಚಿ, ಕತ್ತಲೆಯನ್ನು ಹೋಗಲಾಡಿಸುವ ಹಬ್ಬವೇ ದೀಪಾವಳಿ. ದೀಪಾವಳಿ ಹಬ್ಬವನ್ನು ಮಕ್ಕಳೊಂದಿಗೆ ದೀಪಗಳನ್ನು ಹಚ್ಚಿ ಅಲಂಕರಿಸಿ ಸಡಗರ ಸಂಭ್ರಮದಿಂದ ನಮ್ಮ ಶಾಲೆಯಲ್ಲಿ ಆಚರಿಸಲಾಯಿತು.



## ಶಾಲೆಯ ಅತ್ಯುತ್ತಮ ಸೌಲಭ್ಯಗಳು

* ಹಚ್ಚ ಹಸಿರಿನ ನಿಸರ್ಗದ ಮಡಿಲು.
* ಶಾಲಾ ಆವರಣದಲ್ಲಿ ದಕ್ಷಿಣಾ ಮೂರ್ತಿ ದೇಗುಲ.
* ವಿಶಾಲವಾದ ಸುಸಜ್ಜಿತ ಮೂರು ಮಹಡಿಗಳ ಕಟ್ಟಡ.
* ಸಂಗೀತ, ನೃತ್ಯ, ಯೋಗ, ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ.
* ನಿಸರ್ಗ ವಿದ್ಯಾರ್ಥಿಗಳ ಸಹಕಾರ ಸಂಘ.
* ಕಲಾಕೂಟ, ವಿಜ್ಞಾನ ಕೂಟ ಮತ್ತು ಕ್ರೀಡಾಕೂಟ.
* ವಿಸ್ತಾರವಾದ ಗ್ರಂಥಾಲಯ.
* ಅತ್ಯುನ್ನತ ದರ್ಜೆಯ ವಿಜ್ಞಾನ ಪ್ರಯೋಗಾಲಯ.
* ಅಂತರ್ಜಾಲ ಸೌಲಭ್ಯವಿರುವ ಕಂಪ್ಯೂಟರ್ ಲ್ಯಾಬ್.
* ವಿಜ್ಞಾನ ಮತ್ತು ಗಣಿತ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳಿಂದ ಸೆಮಿನಾರ್.
* ಮಕ್ಕಳಿಂದ ಮೇಲ್ಛಾವಣಿ ಕೈ ತೋಟ.
* ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ತರಬೇತಿ.
* ಏಳನೇ ತರಗತಿಯಿಂದಲೇ ವೃತ್ತಿ ಕೌಶಲ್ಯದ ಬಗ್ಗೆ ತರಬೇತಿ ಮತ್ತು ಮಾರ್ಗದರ್ಶನ.
* ಮಕ್ಕಳ ಅಭಿರುಚಿಗೆ ಅನುಗುಣವಾಗಿ ಪ್ರತಿಭೆಯನ್ನು ಗುರ್ತಿಸಿ ತರಬೇತಿಯನ್ನು ನೀಡಲಾಗುವುದು.
* ಪಠ್ಯೇತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನ ಇತರ ಉನ್ನತ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸುತ್ತಾ ವಿದ್ಯಾರ್ಥಿಗಳನ್ನು ಸರ್ವತೋಮುಖ ಬೆಳವಣಿಗೆ ಕಡೆ ಮಾರ್ಗದರ್ಶನ ನೀಡಲಾಗುತ್ತಿದೆ.
* ಗುರುಕುಲ ಪದ್ಧತಿಯ ಮಾದರಿ ಶಿಕ್ಷಣ ವ್ಯವಸ್ಥೆ.

ಹೆಚ್.ಎ.ಎಲ್ ನಲ್ಲಿ ಪ್ರದರ್ಶನಕ್ಕೆಂದು ನಿರ್ಮಿಸಿರುವ ಯುದ್ಧ ವಿಮಾನಗಳ ಮಾಹಿತಿಯನ್ನು ಪಡೆಯುವ ಸಲುವಾಗಿ ಪ್ರೌಢಶಾಲಾ ವಿಭಾಗದ ಎಲ್ಲಾ ಮಕ್ಕಳಿಗೂ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡಿದ್ದು ಅದರ ಬಗ್ಗೆ ಮಾಹಿತಿಯನ್ನು ನೀಡಲಾಯಿತು.





ಪ್ರತಿಷ್ಠಿತ ಸಂಸ್ಥೆಯಾದ "ಮಾರ್ಗನ್ಸ್ ಸ್ಟ್ಯಾನ್ಲಿ " ಸಹಯೋಗದಲ್ಲಿ ಪ್ರೌಢಶಾಲಾ ವಿಭಾಗದ ಮಕ್ಕಳಿಗೆ, **"Cyber security awareness program "** ಎಂಬ ಕಾರ್ಯಾಗಾರವನ್ನು ಆಯೋಜಿಸಿ ಮಕ್ಕಳಿಗೆ ಸೈಬರ್ ನ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿರುತ್ತೇವೆ.

ವಿಜ್ಞಾನ ಮತ್ತು ಕಲಾ ಪ್ರದರ್ಶನವು ಪ್ರತಿ ವರ್ಷವು ಫೆಬ್ರವರಿ **28** ರಂದು ನಡೆಯಲಿದ್ದು, ಪೂರ್ವ- ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ಹಳ್ಳಿ ಮತ್ತು ನಗರದ ಮಾದರಿಗಳನ್ನು ಪ್ರಾಥಮಿಕ ವಿಭಾಗದ ಮಕ್ಕಳು ವೈದ್ಯಕೀಯ ಸಸ್ಯಗಳ ಪ್ರದರ್ಶನ ಹಾಗೂ ಪೌಷ್ಟಿಕಾಂಶದ ಬಗ್ಗೆ ತಮ್ಮ ತೊದಲು ನುಡಿಗಳಲ್ಲಿ ವಿವರಿಸುತ್ತಾ ಎಲ್ಲರ ಮನ ಸೆಳೆದರು. ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದ ಮಕ್ಕಳು ವಿಜ್ಞಾನಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನವನ್ನು ಮಾಡಿದರು.





ಲೋಕಸಭೆ ಮತ್ತು ರಾಜ್ಯಸಭೆಯ ಅಧಿವೇಶನದಲ್ಲಿ ಶಾಸಕ ತೇಜಸ್ವಿ ಸೂರ್ಯ ಹಾಗೂ ಅಶ್ವಿನಿ ಕುಮಾರ್ ಚೌಬೆಯ್ ರವರು ಹಣಕಾಸು ನಿರ್ವಹಣೆ ಮತ್ತು ಆಹಾರ ಪೋಲನ್ನು ತಡೆಗಟ್ಟುವ ಬಗ್ಗೆ ಚರ್ಚೆ ನಡೆಸಿದರು. ಈ ಎರಡು ವಿಚಾರಗಳ ಕುರಿತು ಹಲವು ವರ್ಷಗಳಿಂದ ನಮ್ಮ ಶಾಲೆಯಲ್ಲಿ ಹಣಕಾಸು ಮತ್ತು ಆಹಾರ ಪೋಲಿನ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಿ, ಈ ವಿಚಾರವಾಗಿ ಮಕ್ಕಳು ಗಮನಹರಿಸುವಂತೆ ಮಾರ್ಗದರ್ಶನ ನೀಡಲಾಗಿರುತ್ತದೆ.

ಬೆಂಗಳೂರಿನ ಸ್ವಾಮಿ ವಿವೇಕಾನಂದ ಯೋಗ ಸಂಶೋಧನಾ ಸಂಸ್ಥೆ ಮತ್ತು ಅಮೆರಿಕ ಯೋಗ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ವೀರಭದ್ರಾಸನದಲ್ಲಿ ನಮ್ಮ ಶಾಲೆಯ ಮಕ್ಕಳು ಅತ್ಯುತ್ತಮ ಪ್ರದರ್ಶನ ನೀಡಿ, ಗಿನ್ನಿಸ್ ದಾಖಲೆಗೆ ಸೇರ್ಪಡೆಗೊಂಡಿರುವುದು ಹೆಮ್ಮೆಯ ವಿಷಯ.






ಡಿಸೆಂಬರ್ **22** ರಂದು ರಾಷ್ಟ್ರೀಯ ಗಣಿತ ದಿನಾಚರಣೆಯ ಪ್ರಯುಕ್ತ ಕೆ ಎಸ್ ಸಿ ಎಸ್ ಟಿ ಅವರು ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿದ್ದು, ಪ್ರಾರ್ಥನೆ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಗಮಿಸಿದಂತಹ ಗಣಿತಜ್ಞರೊಂದಿಗೆ ಸಂವಾದ ನಡೆಸಿ, ಅತಿಥಿಗಳ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ.

## OUR VISION: TO BUILD A RESPONSIBLE CITIZENS FOR TOMORROW

20:1 STUDENT: TEACHER RATIO | GPS ENABLED BUS | CCTV ENABLED CAMPUS | MODERN SEMINAR ROOMS | SPACIOUS CLASS ROOMS | LEADERSHIP TRAINING PROGRAM | SKILL DEVELOPMENT PROGRAM

Watch Me

15/1, 4th Cross, Sampangi Ramaiah Layout,Sidedahalli Road,Bangalore-560073

Locate Me

www.nisargavidyaniketh ana.com nisarga546@gmail.com 9972861912 080-79634697

COME VISIT OUR CAMPUS